# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರನಲವತ್ತನಾಲ್ಕನೆಯಅಧಿವೇಶನವು ದಿನಾಂಕ:13.09.2021 ರಿಂದ 24.09.2021ರವರೆಗೆ ಒಟ್ಟು 10 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 62ಗಂಟೆ 30 ನಿಮಿಷಗಳು.**(ವಿವರಣಾ ಪಟ್ಟಿ–1)**

## 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ ಅಂಗೀಕರಿಸಲಾಯಿತು.**

| ಕ್ರ. ಸಂ | ಹೆಸರು | ಹೊಂದಿದ್ದ ಸ್ಥಾನಮಾನ | ದಿನಾಂಕ |
|---|---|---|---|
| 01 | ಕಮಲಾರ ಭೀಮಶಾ ಶಾಣಪ್ಪ | ಮಾಜಿ ಸಚಿವರು.ಮಾಜಿ ಸಂಸದರು, ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು. | 13.09.2021 |
| 02 | ಡಾ. ಮುಮ್ತಾಜ್ ಅಲಿ ಖಾನ್ | ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು. | 13.09.2021 |
| 03 | ಡಾ. ಸಿದ್ದಲಿಂಗಯ್ಯ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 13.09.2021 |
| 04 | ಎಸ್.ಎಂ. ಆನಂದ್ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 13.09.2021 |
| 05 | ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಹಾಲಿ ಸದಸ್ಯರು. | 13.09.2021 |
| 06 | ಕೃಷ್ಣ | ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು, ಮಾಜಿ ಸಚಿವರು ಹಾಗೂ ಮಾಜಿ ಸಂಸದರು | 13.09.2021 |
| 07 | ಡಾ. ಜಿ.ಮಾದೇಗೌಡ | ಮಾಜಿ ಸಂಸದರು, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 13.09.2021 |
| 08 | ಷಣ್ಮುಖಪ್ಪ ಬಸಪ್ಪ ಸಿದ್ನಾಳ | ಮಾಜಿ ಸಂಸದರು | 13.09.2021 |
| 09 | ಎಂ.ರಾಜಗೋಪಾಲ | ಮಾಜಿ ಸಂಸದರು. | 13.09.2021 |
| 10 | ಬಾಬಾಗೌಡ ರುದ್ರಗೌಡ ಪಾಟೀಲ್ | ಕೇಂದ್ರದ ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 13.09.2021 |
| 11 | ಎ. ಕೆ. ಅಬ್ದುಲ್ ಸಮದ್ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು. | 13.09.2021 |
| 12 | ಪ್ರೊ. ಜಿ. ವೆಂಕಟಸುಬ್ಬಯ್ಯ | ಕನ್ನಡ ನಿಘಂಟು ತಜ್ಞರು | 13.09.2021 |
| 13 | ಜರಗನಹಳ್ಳಿ ಶಿವಶಂಕರ್ | ಹಿರಿಯ ಕವಿ | 13.09.2021 |
| 14 | ಷಣ್ಮುಖಪ್ಪ ಕಾಶಪ್ಪ ಯರಕರ | ಶಿಲ್ಪ ಕಲಾವಿದರು | 13.09.2021 |
| 15 | ಅರವಿಂದ್ | ಚಲನಚಿತ್ರ ನಟರು | 13.09.2021 |
| 16 | ಕನಕ ಮೂರ್ತಿ | ಹಿರಿಯ ಶಿಲ್ಪ ಕಲಾವಿದೆ | 13.09.2021 |

| | | | |
|---|---|---|---|
| 17 | ಡಾ. ಲಕ್ಷ್ಮಿ ತಾತಾಚಾರ್ | ಹಿರಿಯ ವಿದ್ವಾಂಸರು | 13.09.2021 |
| 18 | ಬಿ.ಭಾನುಮತಿ | ನೃತ್ಯ ಕಲಾವಿದೆ | 13.09.2021 |
| 19 | ಡಾ. ಅಶೋಕ ರಾಮಣ್ಣ ಸೊನ್ನದ | ಹಿರಿಯ ತಜ್ಞ ವೈದ್ಯ | 13.09.2021 |
| 20 | ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ | ಸ್ವಾತಂತ್ರ್ಯ ಹೋರಾಟಗಾರರು | 13.09.2021 |
| 21 | ಪ್ರೊ. ವಸಂತ ಕುಷ್ಟಗಿ | ಹಿರಿಯ ಸಾಹಿತಿ | 13.09.2021 |
| 22 | ಪ್ರೊ. ಎಂ.ಐ. ಸವದತ್ತಿ | ಹಿರಿಯ ಶಿಕ್ಷಣ ತಜ್ಞ | 13.09.2021 |
| 23 | ಜಯಂತಿ | ಹಿರಿಯ ಚಲನಚಿತ್ರ ನಟಿ | 13.09.2021 |
| 24 | ಡಾ:ಹೆಚ್. ಗಿರಿಜಮ್ಮ | ಖ್ಯಾತ ವೈದ್ಯೆ ಹಾಗೂ ಲೇಖಕಿ | 13.09.2021 |
| 25 | ಶ್ರೀ ಆಸ್ಕರ್ ಫರ್ನಾಂಡಿಸ್ | ಮಾಜಿ ಕೇಂದ್ರ ಸಚಿವರು, ಮಾಜಿ ಲೋಕಸಭೆಯ ಸದಸ್ಯರು ಹಾಗೂ ಹಾಲಿ ರಾಜ್ಯ ಸಭೆಯ ಸದಸ್ಯರು. | 13.09.2021 |
| 26 | ಶ್ರೀ ವಿಜಯ್ | ಚಲನಚಿತ್ರ ನಟರು | 13.09.2021 |

## 02. ನೂತನ ಸಚಿವರ ಪರಿಚಯ

ದಿನಾಂಕ:13.09.2021ರಂದು ಮಾನ್ಯ ಸಭಾನಾಯಕರು ನೂತನವಾಗಿ ಆಯ್ಕೆಯಾಗಿರುವ ಮಾನ್ಯ ಸಚಿವರುಗಳನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

ಶ್ರೀಯುತರುಗಳಾದ:–

1. ಅರಗ ಜ್ಞಾನೇಂದ್ರ, ಮಾನ್ಯ ಗೃಹ ಸಚಿವರು
2. ಬಿ.ಸಿ.ನಾಗೇಶ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು
3. ವಿ. ಸುನೀಲ್ ಕುಮಾರ್, ಮಾನ್ಯ ಇಂಧನ ಹಾಗೂ ಕನ್ನಡ ಸಂಸ್ಕೃತಿ ಸಚಿವರು
4. ಉಮೇಶ್ ವಿಶ್ವನಾಥ್ ಕಟ್ಟಿ, ಮಾನ್ಯ ಅರಣ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು
4. ಗೋವಿಂದ ಎಂ. ಕಾರಜೋಳ, ಮಾನ್ಯ ಜಲಸಂಪನ್ಮೂಲ ಸಚಿವರು
6. ಡಾ:ಸಿ.ಎನ್. ಅಶ್ವಥನಾರಾಯಣ್, ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
7. ಕೆ. ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು,

ದಿನಾಂಕ:14.09.2021ರಂದು ಮಾನ್ಯ ಸಭಾನಾಯಕರು ನೂತನವಾಗಿ ಆಯ್ಕೆಯಾಗಿರುವ ಮಾನ್ಯ ಸಚಿವರುಗಳನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

1. ಶ್ರೀ ಮುರುಗೇಶ್ ಆರ್ ನಿರಾಣಿ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು,

2. ಶ್ರೀ ಎನ್. ಮುನಿರತ್ನ, ಮಾನ್ಯ ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು,
3. ಶ್ರೀ ಬಿ.ಸಿ.ಪಾಟೀಲ್, ಮಾನ್ಯ ಕೃಷಿ ಸಚಿವರು
4. ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು

**03. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

01. ದಿನಾಂಕ: 14.09.2021ರಂದುಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೆ, ಎರಡನೆ ಪಟ್ಟಿಯನ್ನು ಮತ್ತು ದಿನಾಂಕ:23.09.2021ರಂದುಮೂರನೇ ಪಟ್ಟಿಯನ್ನು ಮಂಡಿಸಲಾಯಿತು.

02. ದಿನಾಂಕ:16.09.2021ರಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ವರದಿಗಳನ್ನು ಮಂಡಿಸಿದರು.

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲೆ ನೀಡುವ ಲೆಕ್ಕಪರಿಶೋಧನಾ ವರದಿಯನ್ನು (2021ನೇ ವರ್ಷದ ವರದಿ ಸಂಖ್ಯೆ:01) ಸಭೆಯ ಮುಂದೆ ಮಂಡಿಸಿದರು.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಬೆಂಗಳೂರು ನಗರ ಪ್ರದೇಶದಲ್ಲಿ ಮಳೆ ನೀರು ನಿರ್ವಹಣೆಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು (2021ನೇ ವರ್ಷದ ವರದಿ ಸಂಖ್ಯೆ:02) ಸಭೆಯ ಮುಂದೆ ಮಂಡಿಸಿದರು.

03. ದಿನಾಂಕ:23.09.2021ರಂದುಮಾನ್ಯ ಮುಖ್ಯಮಂತ್ರಿಗಳುಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ಅನುಪಾಲನಾ ಲೆಕ್ಕಪರಿಶೋಧನಾ ವರದಿಯನ್ನು (2021ನೇ ವರ್ಷದ ವರದಿ ಸಂಖ್ಯೆ:3) ಸಭೆಯ ಮುಂದೆ ಮಂಡಿಸಿದರು.

**04. ಕಾರ್ಯದರ್ಶಿಯವರ ವರದಿ**

ದಿನಾಂಕ:13.09.2021ರಂದುಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿ/ರಾಜ್ಯಪಾಲರಿಂದ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿಯನ್ನು ಸದನದಲ್ಲಿ ಕಾರ್ಯದರ್ಶಿಯವರು ಮಂಡಿಸಿದರು. **(ವಿವರಣಾ ಪಟ್ಟಿ–2)**

**05. ಪ್ರಶ್ನೆಗಳು**

ಪ್ರಸ್ತುತ ಅಧಿವೇಶನದಲ್ಲಿ 1582 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 147 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1432 ಪ್ರಶ್ನೆಗಳ ಪೈಕಿ606ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

**06. ಶೂನ್ಯವೇಳೆ**

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–3ರಲ್ಲಿ ವಿವರಿಸಿದೆ.

**07. ನಿಯಮ 59 ರ ಮೇರೆಗೆ:**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 59ರಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–4ರಲ್ಲಿ ವಿವರಿಸಿದೆ.

**08. ನಿಯಮ 68**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 68ರಡಿಯಲ್ಲಿ ಚರ್ಚಿಸಲಾದ ಸೂಚನೆಗಳನ್ನು **ವಿವರಣಾ ಪಟ್ಟಿ–5ರಲ್ಲಿ ವಿವರಿಸಿದೆ.**

**09.ಗಮನ ಸೆಳೆಯುವ ಸೂಚನೆಗಳು**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 72ರಡಿಯಲ್ಲಿ ಪ್ರಸ್ತಾಪಿಸಲಾದಸೂಚನೆಗಳನ್ನು **ವಿವರಣಾ ಪಟ್ಟಿ–6ರಲ್ಲಿ** ವಿವರಿಸಿದೆ.

10.**ನಿಯಮ 330ರ ಮೇರೆಗೆ ಚರ್ಚೆ.**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು**ವಿವರಣಾ ಪಟ್ಟಿ–7ರಲ್ಲಿ** ವಿವರಿಸಿದೆ

**11. ಪ್ರಕಟಣೆಗಳು**

01. ದಿನಾಂಕ:14.09.2021ರಂದು ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡುವ ಸದಸ್ಯರ ಪಟ್ಟಿಯನ್ನು ಪ್ರಕಟಿಸಲಾಯಿತು.

02. ದಿನಾಂಕ:14.09.2021ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಿರುವ ಬಗ್ಗೆ ಪ್ರಕಟಿಸಲಾಯಿತು

03. ದಿನಾಂಕ:16.09.2021ರಂದುಮಾನ್ಯ ಸಭಾಪತಿಯವರು ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಪ್ರಕಟಿಸಿದರು.

04.ದಿನಾಂಕ:24.09.2021 ರಂದು ಮಧ್ಯಾಹ್ನದವರೆಗೆ ನಿಗದಿತ ಕಾರ್ಯಕಲಾಪಗಳು ಪೂರ್ಣಗೊಂಡ ಮೇಲೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಶಾಸಕರುಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗಿರುತ್ತದೆ. ಮಧ್ಯಾಹ್ನ2.30ಕ್ಕೆ ವಿಧಾನ ಸಭೆಯ ಸಭಾಂಗಣದಲ್ಲಿ ಲೋಕಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರು **'ಪ್ರಜಾಪ್ರಭುತ್ವ ಸಂವಿಧಾನದ ಮೌಲ್ಯಗಳ ರಕ್ಷಣೆ'** ಕುರಿತು ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ಸದರಿ ಸಭೆಯಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಭಾಗವಹಿಸಬೇಕೆಂದು ದಿನಾಂಕ:20.09.2021ರಂದುಮಾನ್ಯ ಸಭಾಪತಿಯವರು ಪ್ರಕಟಿಸಿದರು.

05. ದಿನಾಂಕ:23.09.2021ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ:21.06.2021ರಿಂದ ಆರು ತಿಂಗಳವರೆಗೆ ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿದ್ದು, ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**06**. ದಿನಾಂಕ:24.09.2021ರಂದು ಮಧ್ಯಾಹ್ನ:02.30 ಗಂಟೆಗೆ ವಿಧಾನಸಭೆಯ ಸಭಾಂಗಣದಲ್ಲಿ ಲೋಕಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರು **"ಪ್ರಜಾಪ್ರಭುತ್ವ ಸಂಸದೀಯ ಮೌಲ್ಯಗಳ ರಕ್ಷಣೆ"** ಕುರಿತು ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಪ್ರಧಾನ ಭಾಷಣ ಮಾಡಲಿದ್ದಾರೆಂದು ಈಗಾಗಲೇ ದಿನಾಂಕ:16.09.2021 ಮತ್ತು 20.09.2021 ರಂದು ಸದನದ ಗಮನಕ್ಕೆ ತರಲಾಗಿದೆ. ಈ ಹಿನ್ನಲೆಯಲ್ಲಿ ನಾಳೆ ಮಧ್ಯಾಹ್ನ:01.00 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಶಾಸಕರುಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗಿರುತ್ತದೆ.

ಮಾನ್ಯ ಸದಸ್ಯರುಗಳೆಲ್ಲರೂ ನಾಳೆ ದಿನಾಂಕ:24.09.2021 ರಂದು ಮಧ್ಯಾಹ್ನ:02.30ಕ್ಕೆ ವಿಧಾನ ಸಭೆಯ ಸಭಾಂಗಣದಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ ಎಂದು ದಿನಾಂಕ:23.09.2021ರಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## 12.ಚುನಾವಣಾ ಪ್ರಸ್ತಾವ

**ದಿನಾಂಕ:15.09.2021ರಂದು**ಮಾನ್ಯ ವಸತಿ ಸಚಿವರು ಮಾನ್ಯ ಸಭಾನಾಯಕರ ಪರವಾಗಿ 2021–22ನೇ ಸಾಲಿನ ವಿಧಾನ ಮಂಡಲ/ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಪ್ರಸ್ತಾವವನ್ನು ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ 2 ಸದಸ್ಯರನ್ನು ಚುನಾಯಿಸುವ ಪ್ರಸ್ತಾವವನ್ನು ಮಂಡಿಸಲಾಯಿತು.

ದಿನಾಂಕ: 22.09.2021 ರಂದುರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ 2021–2022ನೇ ಸಾಲಿನ ವಿಧಾನ ಮಂಡಲದ/ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

## 13. ವರದಿಗಳನ್ನೊಪ್ಪಿಸುವುದು

**ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡ ವರದಿಗಳನ್ನೊಪ್ಪಿಸಲಾಯಿತು.**

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಸಲ್ಲಿಸಿದ ದಿನಾಂಕ | ವರದಿ ಸಂಖ್ಯೆ |
|---|---|---|---|
| 1 | ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮ್ಕಕಳ ಕಲ್ಯಾಣ ಸಮಿತಿ | 15.09.2021 | 37 |
| 2 | ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ | 17.09.2021 | ಮೊದಲನೆ ವರದಿ |
| 3 | ಅಧೀನ ಶಾಸನ ರಚನಾ ಸಮಿತಿ | 21.09.2021 | 51 |
| 4 | ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ. | 23.09.2021 | 34 |
| 5 | ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ. | 24.09.2021 | 4 |

## 14.ಸಭಾಪತಿಯವರ ತೀರ್ಪು

ವಿಧಾನ ಪರಿಷತ್ತಿನಲ್ಲಿ ದಿನಾಂಕ:16.09.2021ರಂದು ಮಾನ್ಯ ಶಾಸಕರಾದ ಶ್ರೀ ಪಿ.ಆರ್.ರಮೇಶ್ ಅವರು ಶಾಸಕರುಗಳ ಆರೋಗ್ಯ ಹಿತದೃಷ್ಟಿಯಿಂದ ಒದಗಿಸಲಾಗುತ್ತಿರುವ ಮುಖ ಗವಚವು (ಫೇಸ್ ಮಾಸ್ಕ್) ಅವಧಿ ಮೀರಿದ ಹಾಗೂ ಚೈನಾ ದೇಶದಲ್ಲಿ ಉತ್ಪಾದಿಸಿರುವ ಕಳಪೆ ಮಾಸ್ಕ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಆರೋಪಿಸಿರುತ್ತಾರೆ.

ಮಾನ್ಯ ಸದಸ್ಯರ ಆರೋಪವನ್ನು ನಾನು ಗಂಭೀರವಾಗಿ ಪರಿಗಣಿಸಿ ಪರಿಶೀಲಿಸಿರುತ್ತೇನೆ.ಸದರಿ ಮಾಸ್ಕ್‌ನ ವಾರಂಟಿ ಅವಧಿಯು ಒಂದು ವರ್ಷದ್ದಾಗಿದ್ದು, ಅದರ ಮೇಲೆ ಎರಡು ವರ್ಷಗಳ ವಾರಂಟಿ ಅವಧಿ ಎಂಬ ಸ್ಟಿಕ್ಕರ್ ಅನ್ನು ಅಚ್ಚಿರುವುದು ಕಂಡು ಬಂದಿರುತ್ತದೆ.ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಎನ್–95 ಫೇಸ್ ಮಾಸ್ಕ್‌ಗಳನ್ನು ಒದಗಿಸಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕೋರಲಾಗಿದ್ದು, ಸದರಿ ಇಲಾಖಾ ವತಿಯಿಂದಲೇ ಖರೀದಿಸಿ ಸರಬರಾಜು ಮಾಡಿರುವಂತದ್ದಾಗಿರುತ್ತದೆ.

ಆದುದರಿಂದ ಈ ನ್ಯೂನ್ಯತೆಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ತನಿಖೆ ನಡೆಸಿ ಈ ಲೋಪಕ್ಕೆ ಕಾರಣಕರ್ತರಾದ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಮೇಲೆ ಶಿಸ್ತು ಕ್ರಮವನ್ನು ಈ ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಸೂಚಿಸುತ್ತೇನೆ ಎಂದು ಮಾನ್ಯ ಸಭಾಪತಿಯವರು ದಿನಾಂಕ:17.09.2021ರಂದು ತೀರ್ಪು ನೀಡಿರುತ್ತಾರೆ.

**15.ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವಗಳು.**

**ದಿನಾಂಕ:22.09.2021ರಂದು:**

1. ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಇನ್ನೂ 6 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

2. ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.10.2021ರಿಂದ 6 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

**16. ಕ್ರಿಯಾಲೋಪ**

ದಿನಾಂಕ:22.09.2021ರಂದುಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಅವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 112 ಮತ್ತು 113 ರ ರೀತ್ಯಾ ವಿಧೇಯಕವನ್ನು ಮಂಡನೆಯಾದ ನಂತರ 3 ದಿನಗಳ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕ್ರಿಯಾಲೋಪ ಎತ್ತಿದರು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 121 ರ ರೀತ್ಯಾ ವಿಧೇಯಕವನ್ನು ಮಂಡಿಸಿದ ತರುವಾಯ ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಮಾನ್ಯ ಸಭಾಪತಿಯವರ ಪರಮಾಧಿಕಾರವೆಂದು ಸಭಾನಾಯಕರು ಮತ್ತು ಕಾನೂನು ಸಚಿವರು ತಿಳಿಸಿದರು.

**17. ಶಾಸನ ರಚನೆ**

ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿಯನ್ನು ವಿವರಣಾ ಪಟ್ಟಿ–8 ರಲ್ಲಿ ವಿವರಿಸಿದೆ.

**18. ವಿತ್ತೀಯ ಕಾರ್ಯಕಲಾಪ**

ದಿನಾಂಕ:23.09.2021ರಂದು ಮಾನ್ಯ ಮುಖ್ಯಮಂತ್ರಿಯವರು 2021–22ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸಿದರು.

19. **ಹಕ್ಕುಚ್ಯುತಿ ಮಂಡನೆ**

ದಿನಾಂಕ:21.09.2021ರಂದುವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಶೌಚಾಲಯಗೃಹ ಕೊಠಡಿಯನ್ನು ಉಪಹಾರ ಗೃಹವಾಗಿ ಪರಿವರ್ತಿಸಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರು ಹಕ್ಕುಚ್ಯುತಿ ಸೂಚನೆಯನ್ನು ಮಂಡಿಸಿದರು.

ಮಾನ್ಯ ಸಭಾಪತಿಯವರು ಸದರಿ ಸೂಚನೆಯು ಹಕ್ಕುಚ್ಯುತಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತೀರ್ಪು ನೀಡಿದರು.

## 20. ಅರ್ಜಿಗಳನ್ನೊಪ್ಪಿಸುವುದು

**ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡ ಅರ್ಜಿಗಳನ್ನೊಪ್ಪಿಸಲಾಯಿತು.**

| ಕ್ರ ಸಂ | ಸದಸ್ಯರ ಹೆಸರು | ಸಲ್ಲಿಸಿದ ದಿನಾಂಕ | ವಿಷಯ |
|---|---|---|---|
| **1** | **ಶ್ರೀ ಎಂ.ಎ.ಗೋಪಾಲಸ್ವಾಮಿ** | 15.09.2021 | ಅ)ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿನ ಅಧ್ಯಕ್ಷರ ಮತ್ತು ಪದಾಧಿಕಾರಿಗಳು ಕಾನೂನುಗಳನ್ನು ಉಲ್ಲಂಘಿಸುತ್ತಿರುವ ಕುರಿತು.<br><br>ಆ) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಜಂಬೂರು ಪ್ರಾಥಮಿಕ ಸಹಕಾರ ಸಂಘಕ್ಕೆ ಹಾಸನ ಜಿಲ್ಲಾ ಕೇಂದ್ರ ಬ್ಯಾಂಕ್ ನಿಯಮಿತದ ಸದಸ್ಯತ್ವವನ್ನು ನೀಡದೆ ಇರುವ ಕುರಿತು. |
| **2** | **ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ** | 23.09.2021 | ಅ) ಉದಯ ಅಸೋಸಿಯೇಟ್ಸ್‌ನ ಮಾಲೀಕರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮವಾಗಿ ನಿರ್ಮಾಣಗೊಳ್ಳುತ್ತಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ, ಒಳಚರಂಡಿ ವ್ಯವಸ್ಥೆ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಸಹಕಾರ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಕುರಿತು.<br><br>ಆ)ಬೆಂಗಳೂರಿನ ಗಾಂಧಿನಗರದಲ್ಲಿರುವ 'ಡಿ' ದರ್ಜೆ ನೌಕರರ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವ ಕುರಿತು. |

## 21. ಅಭಿನಂದನಾ ಪ್ರಸ್ತಾವ

ದಿನಾಂಕ:21.09.2021ರಂದು ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ಅವರು ಟೋಕಿಯೊನಲ್ಲಿ ನಡೆದ ಒಲಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್‌ನಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಅಭಿನಂದನಾ ನಿರ್ಣಯ ಮಂಡಿಸಿದರು.

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

## 22. ಖಾಸಗಿ ವಿಧೇಯಕ

ದಿನಾಂಕ:17.09.2021ರಂದು ಶ್ರೀ ಪಿ.ಆರ್. ರಮೇಶ್ ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ (ಮೊದಲನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಿದರು.ಸದರಿ ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು

## 23. ಧರಣಿ ಮತ್ತು ಸಭಾತ್ಯಾಗ

1.ದಿನಾಂಕ:16.09.2021ರಂದು ನಿಯಮ 330ರ ಮೇರೆಗೆ ಶ್ರೀ ಬಿ.ಎಂ.ಫಾರೂಕ್ ಅವರು ಮಂಗಳೂರಿನ ಉಳ್ಳಾಲ ಹಾಗೂ ಸುರತ್ಕಲ್ ಪ್ರದೇಶಗಳಲ್ಲಿ ಅವೈಜ್ಞಾನಿಕ ಹಾಗೂ ಅಸಮರ್ಪಕ ಒಳಚರಂಡಿ ಕ್ರಿಯಾ ಯೋಜನೆಯ ಅನುಷ್ಠಾನದ ಪರಿಣಾಮವಾಗಿ ಆ ಪ್ರದೇಶದ ಜನರು ರೋಗರುಜಿನಗಳಿಂದ ಬಳಲುತ್ತಿರುವ ಬಗ್ಗೆ ಹಾಗೂ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೆಟ್ರೋಲಿಯಂ ಮತ್ತು ಕೆಮಿಕಲ್ಸ್ ಕಂಪನಿಗಳು ಸ್ಥಾಪನೆಗೊಂಡಿದ್ದು ಸದರಿ ಪ್ರದೇಶದಲ್ಲಿ ಅಗ್ನಿಶಾಮಕ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು ಚರ್ಚಿಸಿದ ಸಂದರ್ಭದಲ್ಲಿ ಸದನ ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿ ಜನತಾದಳ (ಜಾತ್ಯಾತೀತ) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು. ದಿನಾಂಕ:17.09.2021ರಂದು ಈ ಸಂಬಂಧ ಸಭೆ ಕರೆಯುವುದಾಗಿ ಮಾನ್ಯ ಸಚಿವರು ತಿಳಿಸಿದರು ಧರಣಿ ನಿರತ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

2.ದಿನಾಂಕ:17.09.2021ರಂದು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2021ನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿದ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿ ವಿರೋಧ ಪಕ್ಷದ ಸದಸ್ಯರುಗಳೊಡನೆ ಸಭಾತ್ಯಾಗ ಮಾಡಿದರು. ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

3.ದಿನಾಂಕ:20.09.2021ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 6ನೇ ಪಟ್ಟಿಯ 86/875 ಸಚಿವರ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿ ಜೆಡಿಎಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

4.ದಿನಾಂಕ:21.09.2021ರಂದು ಶಾಸನ ರಚನೆ ಸಂಬಂಧ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ನೇ ಸಾಲಿನ "ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ 2021"ನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿದ ಸಂದರ್ಭದಲ್ಲಿ ಮಾನ್ಯ ಸಚಿವರು ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲವೆಂದು ತಿಳಿಸಿ ವಿರೋಧ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು. ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

5.ದಿನಾಂಕ:21.09.2021ರಂದು ನಿಯಮ(72) ಗಮನ ಸೆಳೆಯುವ ಸೂಚನೆಯಲ್ಲಿ ಶ್ರೀ ಮರಿತಿಬ್ಬೇಗೌಡ ಅವರು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ರಚಿಸುವಾಗ ಭೂಸ್ವಾಧೀನಪಡಿಸಿಕೊಳ್ಳದೆ ಇರುವ ಪ್ರದೇಶವನ್ನು ಬಳಕೆ ಮಾಡಿಕೊಂಡು ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದ ಸಂದರ್ಭದಲ್ಲಿ ಮಾನ್ಯ ಸಚಿವರು ನೀಡಿದ ಉತ್ತರವು ಸಮರ್ಪಕವಾಗಿಲ್ಲವೆಂದು ಮಾನ್ಯ ಸದಸ್ಯರು ಬಾವಿಗಿಳಿದು ಧರಣಿ ನಡೆಸಿದರು.

6.ದಿನಾಂಕ:22.09.2021ರಂದು ಶಾಸನ ರಚನೆ ಸಂಬಂಧ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಚಾಣಕ್ಯ ವಿಶ್ವವಿದ್ಯಾಲಯ ವಿಧೇಯಕ, 2021ನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಸೂಚಿಸಿದ ಸಂದರ್ಭದಲ್ಲಿ ವಿಧೇಯಕದ ಪ್ರತಿಯನ್ನು ಶಾಸಕರುಗಳಿಗೆ ಮುಂಚಿತವಾಗಿ ಒದಗಿಸಿರುವುದಿಲ್ಲವೆಂದು ವಿರೋಧ ಪಕ್ಷದ ಸದಸ್ಯರೆಲ್ಲರೂ ವಿರೋಧ ವ್ಯಕ್ತಪಡಿಸಿದರು ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಅವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 112 ಮತ್ತು 113 ರ ರೀತ್ಯಾ ವಿಧೇಯಕವನ್ನು ಮಂಡನೆಯಾದ ನಂತರ 3 ದಿನಗಳ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 121 ರ ರೀತ್ಯಾ ವಿಧೇಯಕವನ್ನು ಮಂಡಿಸಿದ ತರುವಾಯ ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಮಾನ್ಯ ಸಭಾಪತಿಯವರ ಪರಮಾಧಿಕಾರವೆಂದು ಸಭಾನಾಯಕರು ಮತ್ತು ಕಾನೂನು ಸಚಿವರು ತಿಳಿಸಿದ ಸಂದರ್ಭದಲ್ಲಿ ಜನತಾದಳ(ಜಾತ್ಯತೀತ) ಪಕ್ಷದ ಸದಸ್ಯರುಗಳು ವಿಧೇಯಕವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು ಮತ್ತು ವಿಧೇಯಕವನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಕಾಂಗ್ರೇಸ್ ಪಕ್ಷ ಸದಸ್ಯರುಗಳೆಲ್ಲರೂ ಸಭಾತ್ಯಾಗ ಮಾಡಿದರು ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 24. ಅಧಿವೇಶನ ಮುಂದೂಡಿಕೆ

ದಿನಾಂಕ:13.09.2021ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 144ನೆಯ ಅಧಿವೇಶನವನ್ನು ದಿನಾಂಕ:24.09.2021ರಂದು ರಾಷ್ಟ್ರಗೀತೆಯೊಂದಿಗೆ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ವಿವರಣಾ ಪಟ್ಟಿ–1**

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| **1** | 13.09.2021 | ಬೆ.11.04<br>ಮ.12.25<br>ಮ.03.21<br>ಸಾ:4.30 | ಮ.12.08<br>ಮ.1.41<br>ಮ.03.23<br>ಸಾ:4.45 | 01.04<br>01.16<br>00.02<br>00.15 |
| **2** | 14.09.2021 | ಬೆ.10.38<br>ಮ.03.31 | ಮ.01.45<br>ಸಾ.06.21 | 03.07<br>02.50 |
| **3** | 15.09.2021 | ಬೆ:10.38<br>ಮ.03.24 | ಬೆ.02.09<br>ರಾ.07.03 | 03.31<br>03.39 |
| **4** | 16.09.2021 | ಬೆ.11.05<br>ಸಾ.03.43 | ಮ.02.02<br>ರಾ.07.04 | 02.57<br>03.21 |
| **5** | 17.09.2021 | ಬೆ.10.15 | ಬೆ.01.45 | 03.30 |
| **6** | 20.09.2021 | ಬೆ:11.05<br>ಮ:3.48 | ಮ:02.23<br>ರಾ:08.10 | 03.18<br>04.22 |
| **7** | 21.09.2021 | ಬೆ:10.47<br>ಮ:3.20<br>ಸಾ:4.48 | ಮ:01.56<br>ಸಾ:4.38<br>ಸಾ:05.02 | 03.09<br>01.18<br>00.14 |
| **8** | 22.09.2021 | ಬೆ:10.52<br>ಮ:03.25 | ಮ:02.00<br>ರಾ:09.35 | 03.08<br>06.10 |
| **9** | 23.09.2021 | ಬೆ:10.40<br>ಸಾ:04.38 | ಮ:02.55<br>ರಾ:12.32 | 04.15<br>07.54 |
| **10** | 24.09.2021 | ಬೆ:10.12 | ಮ:01.55 | 03.43 |
| | | | **ಒಟ್ಟು ಸಮಯ** | **64.10** |

**ವಿವರಣಾ ಪಟ್ಟಿ–2**

**ಕಾರ್ಯದರ್ಶಿಯವರ ವರದಿ**

ಘನತೆವೆತ್ತರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ

ವಿಧಾನ ಸಭೆಯ ವಿಧೇಯಕಗಳು

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01 | ಕರ್ನಾಟಕ ಋಣ ಪರಿಹಾರ ವಿಧೇಯಕ, 2018<br>The Karnataka Debt Relief Bill, 2018 | 16.07.2019<br>01.03.2019 | ರಾಷ್ಟ್ರಪತಿಗಳು<br>ರಾಜ್ಯಪಾಲರು |
| 02. | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020<br>The University of Horticultural Sciences (Amendment) Bill. 2020 | 05.03.2021 | ರಾಜ್ಯಪಾಲರು |
| 03. | ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕ,2018<br>The Rai Technology University, Bangalore (Amendment) Bill, 2018 | 19.03.2021 | ರಾಜ್ಯಪಾಲರು |
| 04. | ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ,2021<br>The Karnataka Money Lenders (Amendment) Bill, 2021 | 25.03.2021 | ರಾಜ್ಯಪಾಲರು |
| 05. | ಕರ್ನಾಟಕ ಧನವಿನಿಯೋಗ ವಿಧೇಯಕ, 2021<br>The Karnataka Appropriation Bill, 2021 | 29.03.2021 | ರಾಜ್ಯಪಾಲರು |
| 06. | ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ 2021<br>The Karnataka Fiscal Responsibility (Amendment) Bill, 2021 | 29.03.2021 | ರಾಜ್ಯಪಾಲರು |
| 07. | ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2021<br>The Karnataka Appropriation (No-2)Bill, 2021 | 29.03.2021 | ರಾಜ್ಯಪಾಲರು |
| 08. | ಕರ್ನಾಟಕ ಪೌರಸಭೆಗಳ ( ತಿದ್ದುಪಡಿ) ವಿಧೇಯಕ, 2021<br>The Karnataka Municipalities(Amendment)Bill, 2021 | 29.03.2021 | ರಾಜ್ಯಪಾಲರು |
| 09. | ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕ, 2021<br>The Karnataka Krishna Basin Development Authority (Repeal) Bill, 2021 | 05.04.2021 | ರಾಜ್ಯಪಾಲರು |
| 10. | ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ವಿಧೇಯಕ,2021<br>The Karnataka Maritime Board (Amendment) Bill, 2021 | 05.04.2021 | ರಾಜ್ಯಪಾಲರು |

| | | | |
|---|---|---|---|
| 11 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2021<br>The Karnataka Transparency in Public Procurements (Amendment) Bill, 2021 | 05.04.2021 | ರಾಜ್ಯಪಾಲರು |
| 12 | ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021<br>The New Horizon Universtiy Bill, 2021 | 15.04.2021 | ರಾಜ್ಯಪಾಲರು |
| 13 | ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ವಿಧೇಯಕ, 2021<br>St. Joseph's University Bill, 2021 | 15.04.2021 | ರಾಜ್ಯಪಾಲರು |
| 14 | ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ<br>2020<br>The Jagadhguru Murugarajendra University Bill, 2020 | 15.04.2021 | ರಾಜ್ಯಪಾಲರು |
| 15 | ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕ, 2020<br>Vidyashilp University Bill, 2020 | 15.04.2021 | ರಾಜ್ಯಪಾಲರು |
| 16 | ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020<br>The Atria University Bill, 200 | 15.04.2021 | ರಾಜ್ಯಪಾಲರು |

**ವಿವರಣಾ ಪಟ್ಟಿ –3**

**144ನೇ ಅಧಿವೇಶನದಲ್ಲಿ ಮಂಡಿಸಲಾದ ಶೂನ್ಯ ವೇಳೆ ಪ್ರಸ್ತಾವಗಳ ವಿವರ**

| ಕ್ರ ಸಂ | ಸದಸ್ಯರ ಹೆಸರು ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | **ಎಸ್.ವಿ. ಸಂಕನೂರ** | 13.09.2021 | ರಾಜ್ಯದ ಸರ್ಕಾರಿ ಐ.ಟಿ.ಐ ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಳೆದ 4 ತಿಂಗಳಿನಿಂದ ವೇತನ ಬಿಡುಗಡೆ ಆಗದಿರುವ ಕುರಿತು | **ದಿನಾಂಕ:14.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 2 | **ಯು.ಬಿ. ವೆಂಕಟೇಶ್** | 13.09.2021 | ಬೆಂಗಳೂರು ನಗರ ಬಸವನಗುಡಿಯಲ್ಲಿರುವ ಕೆಂಪೇಗೌಡ ಜಿಂಕೆ ಪಾರ್ಕ್ ಸಮರ್ಪಕ ನಿರ್ವಹಣೆ ಇಲ್ಲದೇ ಪುಂಡಪೋಕರಿಗಳ ಆವಾಸಸ್ಥಾನವಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ. | ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |

| | | | | |
|---|---|---|---|---|
| 3 | **ಶ್ರೀಕಾಂತ್ ಎಲ್. ಘೋಟ್ನೇಕರ್** | 13.09.2021 | ಅರಣ್ಯ ಜಮೀನು ಸಾಗುವಳಿದಾರರಿಗೆ ಪಹಣಿ ನೀಡುವ ಕುರಿತು 1972ರ ಆದೇಶ ತಡೆಯಾಗಿರುವ ಬಗ್ಗೆ | ಮಾನ್ಯ ಸಭಾನಾಯಕರು ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 4 | **ಕೆ.ಸಿ.ಕೊಂಡಯ್ಯ** | 13.09.2021 | ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲೂಕಿನಲ್ಲಿ ರೈತರು ಬೆಳೆದಿರುವ ಈರುಳ್ಳಿ ಬೆಳೆ ಕೊಳೆ ರೋಗ ಬಂದು ಬೆಳೆ ನಷ್ಟವಾಗಿರುವುದರಿಂದ ನಷ್ಟ ಪರಿಹಾರವನ್ನು ಅಂದಾಜಿಸಿ ಪರಿಹಾರ ಮಂಜೂರು ಮಾಡುವ ಬಗ್ಗೆ | ಮಾನ್ಯ ಸಭಾನಾಯಕರು ಮಾನ್ಯ ತೋಟಗಾರಿಕಾ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 5 | **ಮುನಿರಾಜು ಗೌಡ ಪಿ.ಎಂ** | 14.09.2021 | ರಾಮನಗರ ತಾಲ್ಲೂಕಿನ ವಡ್ಡರಹಳ್ಳಿ, ಗೊಲ್ಲರ ದೊಡ್ಡಿ ಗ್ರಾಮದ ಹಂದಿಗೊಂದಿ ಅರಣ್ಯ ಪ್ರದೇಶದಲ್ಲಿರುವ ಇರುಳಿಗ ಬುಡಕಟ್ಟು ಸಮುದಾಯ ನಡೆಸುತ್ತಿರುವ ಧರಣಿ ಬಗ್ಗೆ | **ದಿನಾಂಕ:20.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 6 | **ರವಿಕುಮಾರ್ ಎನ್.** | 14.09.2021 | ಬೆಂಗಳೂರು ನಗರದಲ್ಲಿ 64,000 ಕ್ಕೂ ಹೆಚ್ಚು ಅನಧಿಕೃತ ನೀರಿನ ಸಂಪರ್ಕ ಪಡೆದು ರಸ್ತೆಗಳನ್ನು ಅಗೆದು ಗುಂಡಿಗಳಾಗಿರುವ ಬಗ್ಗೆ | ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 7 | **ಎಸ್. ವಿ. ಸಂಕನೂರು** | 14.09.2021 | ಟಿ.ಇ.ಟಿ. ಫಲಿತಾಂಶ ಅತ್ಯಂತ ಕಳಪೆಯಾಗಿರುವ ಬಗ್ಗೆ | **ದಿನಾಂಕ:17.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 8 | **ಕೆ.ಟಿ. ಶ್ರೀಕಂಠೇಗೌಡ** | 14.09.2021 | ಮಂಡ್ಯ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿ ಕಳೆದ ಎರಡೂವರೆ ವರ್ಷದಿಂದ ಜಾನುವಾರುಗಳು ನಿಗೂಢವಾಗಿ ಸಾವನ್ನಪ್ಪುತ್ತಿರುವ ಬಗ್ಗೆ | **ದಿನಾಂಕ:15.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 9 | **ಕೆ.ಸಿ. ಕೊಂಡಯ್ಯ** | 14.09.2021 | ಬಾಗಲಕೋಟೆ ಜಿಲ್ಲೆಯ ತುಳಸಿಗೇರಿಯಲ್ಲಿ ವರ್ಷವಿಡೀ ತಯಾರು ಮಾಡುವ ರಾಷ್ಟ್ರಧ್ವಜ ನೇಕಾರರು ಕೋವಿಡ್ ಲಾಕ್ ಡೌನ್ | **ದಿನಾಂಕ:22.09.2021 ರಂದು ಉತ್ತರವನ್ನು ಮಂಡಿಸಲಾಯಿತು** |

| | | | | |
|---|---|---|---|---|
| | | | ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕುರಿತು ಪರಿಹಾರ ನೀಡುವ ಬಗ್ಗೆ. | |
| 10 | **ಕೆ.ಎ.ತಿಪ್ಪೇಸ್ವಾಮಿ** | 14.09.2021 | ತುಮಕೂರು ನಗರದ ಬಿ.ಹೆಚ್. ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಕಟ್ಟಡವು ಬಹಳ ಶಿಥಿಲಾವಸ್ಥೆಯಲ್ಲಿರುವ ಕುರಿತು | **ದಿನಾಂಕ:22.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 11 | **ಮಹಾಂತೇಶ ಮ ಕವಟಗಿಮಠ** | 14.09.2021 | ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಗ್ರಾಮ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ಟೋಲ್ ಮತ್ತು ಕಾಮಗಾರಿಯ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿರುವ ಕುರಿತು | **ದಿನಾಂಕ:15.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 12 | **ಎನ್. ಅಪ್ಪಾಜಿಗೌಡ** | 15.09.2021 | ತಜ್ಞ ವೈದ್ಯಾಧಿಕಾರಿ ಮತ್ತು ಸಾಮಾನ್ಯ ತಜ್ಞ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಕಾಲಾವಕಾಶ ನೀಡುವ ಬಗ್ಗೆ | **ದಿನಾಂಕ:24.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 13 | **ಅರವಿಂದ ಕುಮಾರ್ ಅರಳಿ** | 15.09.2021 | ಕಳೆದ 2-3 ದಿನಗಳ ಹಿಂದೆ ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯ ಮೇಲೆ ನಡೆದಿರುವ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ವೀಡಿಯೋ ಮಾಡಿ ಜಾಲತಾಣದಲ್ಲಿ ವೈರಲ್ ಆಗಿರುವ ಬಗ್ಗೆ | **ದಿನಾಂಕ:24.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 14 | **ಕೆ.ಸಿ.ಕೊಂಡಯ್ಯ** | 15.09.2021 | ರಾಜ್ಯದಲ್ಲಿರುವ ನೇಕಾರರಿಗೆ ಗುರುತಿನ ಚೀಟಿ ನೀಡುವ ಹಾಗೂ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬಗ್ಗೆ | **ದಿನಾಂಕ:21.09.2021 ರಂದು ಉತ್ತರವನ್ನು ಮಂಡಿಸಲಾಯಿತು** |
| 15 | **ಶ್ರೀ ನಿರಾಣಿ ಹನುಮಂತ ರುದ್ರಪ್ಪ** | 15.09.2021 | ಕೆ.ಪಿ.ಎಸ್.ಸಿ. ವತಿಯಿಂದ ನಡೆಸಲಾದ ಎಫ್‌ಡಿಎ ಪರೀಕ್ಷೆಯಲ್ಲಿ ಒಂದೇ ಕೇಂದ್ರದಲ್ಲಿ ಒಂದೇ ಸಮುದಾಯದ 10 ಅಭ್ಯರ್ಥಿಗಳು ಅರ್ಹತೆ ಪಡೆದಿರುವ ಬಗ್ಗೆ | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |

| | | | | |
|---|---|---|---|---|
| 16 | **ಸಂದೇಶ್ ನಾಗರಾಜು** | 15.09.2021 | ಗುಂಡ್ಲುಪೇಟೆ ತಾಲ್ಲೂಕಿನ ಕಗ್ಗಳದ ಹುಂಡಿ ಬಳಿ ಸ್ಥಾಪಿತವಾಗಿರುವ ಸುಗಂಧ ದ್ರವ್ಯ ಉತ್ಪಾದನಾ ಕಾರ್ಖಾನೆಯು ಪರಿಸರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದರಿಂದ ಹೊರಹೊಮ್ಮುತ್ತಿರುವ ರಾಸಾಯನಿಕ ದುರ್ವಾಸನೆಯಿಂದ ಉಸಿರಾಟಕ್ಕೆ ತೊಂದರೆಯಾಗಿರುವ ಬಗ್ಗೆ. | ಮಾನ್ಯ ಪರಿಸರ, ಜೀವಿಶಾಸ್ತ್ರ ಮತ್ತು ಪ್ರವಾಸದ್ಯೋಮ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |
| 17 | **ಯು.ಬಿ.ವೆಂಕಟೇಶ್** | 15.09.2021 | ಕೆ.ಪಿ.ಎಸ್.ಸಿ. ಮೂಲಕ ಕೈಗೊಳ್ಳಲಾದ ಕೆ.ಎ.ಎಸ್. ಹುದ್ದೆಗಳ ನೇಮಕಾತಿ ಪರೀಕ್ಷೆ ಪ್ರಕ್ರಿಯೆ ವಿಳಂಬವಾಗಿರುವ ಬಗ್ಗೆ | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |
| 18 | **ಕೆ.ಟಿ.ಶ್ರೀಕಂಠೇಗೌಡ** | 15.09.2021 | ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡದಿರುವ ಕುರಿತು | ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |
| 19 | **ಎಂ.ಪಿ. ಸುನಿಲ್ ಸುಬ್ರಮಣಿ** | 15.09.2021 | ರಾಜ್ಯದ 34 ಅನುದಾನಿತ ವಿಶೇಷ ಚೇತನ ಮಕ್ಕಳ ಶಾಲೆಯ ಸಿಬ್ಬಂದಿಗಳಿಗೆ 6 ತಿಂಗಳಿನಿಂದ ವೇತನ ಬಿಡುಗಡೆಯಾಗದಿರುವ ಕುರಿತು | ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಗಣಿ ಭೂವಿಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |
| 20 | **ಎಂ. ನಾರಾಯಣಸ್ವಾಮಿ** | 15.09.2021 | ರಾಷ್ಟ್ರೀಯ ಶಿಕ್ಷಣ ನೀತಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ದೌರ್ಜನ್ಯ ನಡೆಸುತ್ತಿರುವ ಬಗ್ಗೆ | ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ವಸತಿ ಸಚಿವರು ತಿಳಿಸಿದರು |
| 21 | **ಯು.ಬಿ. ವೆಂಕಟೇಶ್** | 16.09.2021 | ವೈದ್ಯಕೀಯ ಕೋರ್ಸ್‌ಗಳಿಗೆ ನೀಟ್ ಪರೀಕ್ಷೆ ಬರೆಯದೆ 12ನೇ ತರಗತಿ ಅಂಕಗಳ ಆಧಾರದ ಮೇಲೆ ಪ್ರವೇಶ ನೀಡುವ ಕುರಿತು ಮಸೂದೆ ಜಾರಿಗೆ ತರುವ ಕುರಿತು | ಮಾನ್ಯ ಆರೋಗ್ಯ ಸಚಿವರಿಂದ ಉತ್ತರಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | |
|---|---|---|---|---|
| 22 | ಮರಿತಿಬ್ಬೇಗೌಡ | 16.09.2021 | ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯಿರುವುದರಿಂದ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಕುರಿತು | ದಿನಾಂಕ:20.09.2021 ರಂದು ಉತ್ತರವನ್ನು ಮಂಡಿಸಲಾಯಿತು |
| 23 | ಎಸ್. ರುದ್ರೇಗೌಡ | 16.09.2021 | ರಾಜ್ಯದಲ್ಲಿ ಸೈಬರ್ ಕ್ರೈಂ ಹೆಚ್ಚಾಗಿರುವ ಬಗ್ಗೆ . | ದಿನಾಂಕ:23.09.2021 ರಂದು ಉತ್ತರವನ್ನು ಮಂಡಿಸಲಾಯಿತು |
| 24 | ಸಂದೇಶ ನಾಗರಾಜು | 16.09.2021 | ಅವರು ನಾಗರಹೊಳೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿದರು. | ದಿ:21.09.2021ರಂದು ಉತ್ತರವನ್ನು ಮಂಡಿಸಲಾಯಿತು |
| 25 | ಬಿ.ಕೆ.ಹರಿಪ್ರಸಾದ್ | 16.09.2021 | ಚಳುವಳಿಗಳಲ್ಲಿ ಭಾಗವಹಿಸುವವರನ್ನು ರೌಡಿಶೀಟರ್ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು ಪ್ರಸ್ತುತ ಕೊಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ರೌಡಿ ಶೀಟರ್ ಪಟ್ಟಿಯನ್ನು ಪರಾಮರ್ಶಿಸಲಾಗುತ್ತಿದ್ದು ಅಮಾಯಕರನ್ನು ಸದರಿ ಪಟ್ಟಿಯಿಂದ ಕೈಬಿಡಬೇಕೆಂಬುದರ ಕುರಿತು | ದಿ:22.09.2021ರಂದು ಉತ್ತರವನ್ನು ಮಂಡಿಸಲಾಯಿತು |
| 26 | ಕೆ.ಸಿ.ಕೊಂಡಯ್ಯ | 16.09.2021 | ಕೋವಿಡ್ ಚಿಕಿತ್ಸೆಗಾಗಿ ಅವಶ್ಯವಿರುವ ಸಲಕರಣೆಗಳ ಖರೀದಿಗೆ ನಿಯಮ ಉಲ್ಲಂಘಿಸಿ ಟೆಂಡರ್ ಕರೆದಿರುವುದರಿಂದ ಪಾರದರ್ಶಕತೆ ಯಿಂದ ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು. | ದಿನಾಂಕ:17.09.2021 ರಂದು ಉತ್ತರವನ್ನು ಮಂಡಿಸಲಾಯಿತು |
| 27 | ಕೆ.ಎ.ತಿಪ್ಪೇಸ್ವಾಮಿ | 16.09.2021 | ನೌಕರರ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಭದ್ರತೆ ಒದಗಿಸುವ ಬಗ್ಗೆ. | ದಿನಾಂಕ:17.09.2021 ರಂದು ಉತ್ತರವನ್ನು ಮಂಡಿಸಲಾಯಿತು |

| | | | | |
|---|---|---|---|---|
| 28 | ಆರ್.ಬಿ.ತಿಮ್ಮಾಪುರ | 17.09.2021 | ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ತಯಾರಿಸಿರುವ ನೀಲಿ ನಕ್ಷೆಯಲ್ಲಿ ಮಹಾರಾಣಿ ಕೆರೆ ನಾಪತ್ತೆಯಾಗಿರುವ ಬಗ್ಗೆ | ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 29 | ಯು.ಬಿ.ವೆಂಕಟೇಶ್ | 17.09.2021 | ಬಿ.ಬಿ.ಎಂ.ಪಿ. ಯಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಯಾಗದೆ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 30 | ಎನ್. ಅಪ್ಪಾಜಿ ಗೌಡ | 17.09.2021 | ಬೆಂಗಳೂರು ನಗರದಲ್ಲಿ ಪೊಲೀಸರು ಕೊರೋನಾ ವಿಚಾರವಾಗಿ ಮಾಸ್ಕ್ ಹಾಕದವರಿಗೆ ಕೇಸ್ ದಾಖಲಿಸಿ ದಂಡ ವಸೂಲಿ ಮಾಡುತ್ತಿರುವ ಬಗ್ಗೆ | ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 31 | ವೀಣಾ ಅಚ್ಚಯ್ಯ ಎಸ್. | 17.09.2021 | ಕೊಡವ ಜನಾಂಗ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವ ಬಗ್ಗೆ | ದಿ:20.09.2021ರಂದು ಉತ್ತರವನ್ನು ಮಂಡಿಸಲಾಯಿತು |
| 32 | ಎಸ್.ವ್ಹಿ.ಸಂಕನೂರ | 20.09.2021 | ಉತ್ತರ ಕರ್ನಾಟಕ ಭಾಗದಲ್ಲಿ ಜಿಂಕೆ/ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆ ನಾಶವಾಗಿರುವ ಬಗ್ಗೆ ಹಾಗೂ ಕಪ್ಪತಗುಡ್ಡದ ಸರಹದ್ದಿನಲ್ಲಿ ಜಿಂಕೆ ಪಾರ್ಕ್ ನಿರ್ಮಿಸುವ ಕುರಿತು | ದಿ:23.09.2021ರಂದು ಉತ್ತರವನ್ನು ಮಂಡಿಸಲಾಯಿತು |
| 33 | ಮರಿತಿಬ್ಬೇಗೌಡ | 20.09.2021 | ಮಂಡ್ಯ ವಿಶ್ವವಿದ್ಯಾಲಯದಲ್ಲಿ ಮೂಲ ಸೌಕರ್ಯಗಳ ಕೊರತೆ ಹಾಗೂ ಅತಿಥಿ ಉಪನ್ಯಾಸಕರು, ಗ್ರೂಪ್ 'ಡಿ' ನೌಕರರ ಹುದ್ದೆಗಳ ಮಂಜೂರಾತಿ ಕುರಿತು | ದಿ:24.09.2021ರಂದು ಉತ್ತರವನ್ನು ಮಂಡಿಸಲಾಯಿತು |
| 34 | ಗೋವಿಂದರಾಜು | 20.09.2021 | ಕೋಲಾರ ಜಿಲ್ಲೆಯಲ್ಲಿ ರೈತರ ಜಮೀನುಗಳಿಗೆ ಪೋಡಿ ಮಾಡುವ ಕುರಿತು. | ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | |
|---|---|---|---|---|
| 35 | ಕೆ.ಎ.ತಿಪ್ಪೇಸ್ವಾಮಿ | 20.09.2021 | ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನಲ್ಲಿ ಅಕ್ಸಿಜೆನ್ ಫ್ಲಾಂಟ್ ಕಾಮಗಾರಿ ಕುಂಠಿತಗೊಂಡಿರುವುದಲ್ಲದೆ ಕೊರೋನಾ 3ನೇ ಅಲೆಗೆ ಮುಂಜಾಗ್ರತಾ ಕ್ರಮಕೈಗೊಳ್ಳುವ ಬಗ್ಗೆ | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 36 | ಡಾ: ವೈ.ಎ.ನಾರಾಯಣಸ್ವಾಮಿ | 20.09.2021 | ರಾಜ್ಯದಲ್ಲಿ ಅತ್ಯಾಚಾರ /ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿದ್ದು, ಆರೋಪಿಗಳ ಮೇಲೆ ಕೂಡಲೇ ಕಠಿಣ ಕ್ರಮ ಜರುಗಿಸಬೇಕೆಂಬ ವಿಷಯದ ಬಗ್ಗೆ | ಮಾನ್ಯ ಗೃಹ ಸಚಿವರು ಉತ್ತರಿಸಿದರು |
| 37 | ಎನ್. ಅಪ್ಪಾಜಿಗೌಡ | 20.09.2021 | ರಾಜ್ಯದಲ್ಲಿ ಮಾದಕ ವಸ್ತುಗಳನ್ನು ಮನೆಗಳಲ್ಲಿ ತಯಾರಿಸಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡುತ್ತಿದ್ದು, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಠಾಣೆ ಪ್ರಾರಂಭಿಸಿ ಸಿಬ್ಬಂದಿಗಳನ್ನು ನೇಮಿಸಿ ಕಾರ್ಯಾಚರಣೆ ಆರಂಭಿಸುವ ಬಗ್ಗೆ. | ಮಾನ್ಯ ಗೃಹ ಸಚಿವರು ಉತ್ತರಿಸಿದರು. |
